ಭಕ್ತಾದಿಗಳಿಗೆ ವ್ಯವಸ್ಥೆ ಕಲ್ಪಿಸುವುದು

167(484) ಶ್ರೀ ವೆಂಕಟಸ್ವಾಮಿ:(ದೇವನಹಳ್ಳಿ) ಮಾನ್ಯ ಗೃಹ ಹಾಗೂ ಮುಜರಾಯಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೇವನಹಳ್ಳಿ ತಾಲ್ಲೂಕು ಶ್ರೀ ಘಾಟಿ ಸುಬ್ರಹ್ಮಣ್ಯಸ್ವಾಮಿ ಕ್ಷೇತ್ರಕ್ಕೆ ಬರುವ ಭಕ್ತಾದಿಗಳಿಗೆ ಪ್ರವಾಸಿ ಗೃಹ ಉದ್ಯಾನವನ ಹಾಗೂ ಶೌಚಾಲಯದ ವ್ಯವಸ್ಥೆ ಕಲ್ಪಿಸಿಕೊಡುವ ಉದ್ದೇಶ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಇದಕ್ಕೆ ತಗಲುವ ಅನುದಾನ ಮೊತ್ತವೆಷ್ಟು ;

ಇ) ಕಾಮಗಾರಿಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ವಿ ಎಸ್ ಆಚಾರ್ಯ(ಗೃಹ ಹಾಗೂ ಮುಜರಾಯಿ ಸಚಿವರು)

ಅ) ಹೌದು. ದೇವಾಲಯದ ಅವರಣದಲ್ಲಿ ಉದ್ಯಾನವನವು ಈಗಾಗಲೇ ಇರುತ್ತದೆ.

ಆ) ಇದಕ್ಕೆ ತಗಲುವ ಅನುದಾನದ ಮೊತ್ತದ ವಿವರ ಈ ಕೆಳಕಂಡಂತಿದೆ:

ಕ್ರ ಸಂ	ಕಾಮಗಾರಿ ವಿವರ	ಅಂದಾಜು ಮೊತ್ತ (ರೂ. ಲಕ್ಷ)
1	ಪ್ರವಾಸಿ ಗೃಹ	330.01
2	ಶೌಚಾಲಯ	8.00

ಇ) ಪ್ರವಾಸಿ ಗೃಹದ ಕಾಮಗಾರಿಯನ್ನು ಪ್ರಾರಂಭಿಸಲು ದಿನಾಂಕ:20–04–2010 ರಂದು ಕಾರ್ಯಾದೇಶ ನೀಡಲಾಗಿದ್ದು, ಸದ್ಯದಲ್ಲೇ ಕಾಮಗಾರಿಯ ಕೆಲಸಗಳನ್ನು ಪ್ರಾರಂಭಿಸಲಾಗುವುದು.

ಶೌಚಾಲಯ ನಿರ್ಮಾಣಕ್ಕೆ ಅಂದಾಜುಪಟ್ಟಿ ತಯಾರಿಸಲಾಗುತ್ತಿದ್ದು, ಪ್ರಾಧಿಕಾರದಿಂದ ತಾಂತ್ರಿಕ ಮತ್ತು ಆಡಳಿತಾತ್ಮಕ ಮಂಜೂರಾತಿಯನ್ನು ಪಡೆದು ಪ್ರಾರಂಭಿಸಲಾಗುವುದು.ಸ